ಮುಖ್ಯ ಚುನಾವಣಾಧಿಕಾರಿಗಳ ಕಚೇರಿ, ಕರ್ನಾಟಕ
ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560 001.
ದೂರವಾಣಿ ಸಂಖ್ಯೆ: 080-22224212.

ಸಂಖ್ಯೆ: ಸಿಆಸುಂ/21/SVEEP/2022(Part 01) ದಿನಾಂಕ: 27.02.2023

ಇವರಿಗೆ,

1. ಆಯುಕ್ತರು ಬಿ.ಬಿ.ಎಂ.ಪಿ ಹಾಗು ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು
2. ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು
3. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗು ಜಿಲ್ಲಾ SVEEP ನೋಡಲ್ ಅಧಿಕಾರಿಗಳು

ಮಾನ್ಯರೆ

ವಿಷಯ : ಮತದಾರರ ಸಾಕ್ಷರತಾ ಸಂಘಗಳ ತಾಲ್ಲೂಕು ಮಟ್ಟದ ತರಬೇತುದಾರರಿಗೆ, ಇ.ಎಲ್.ಸಿ ಸಂಚಾಲಕರಿಗೆ, ಬಿ.ಎಲ್.ಒ.ಗಳಿಗೆ (ಚುನಾವಣಾ ಜಾಗೃತಿ ಸಂಘ) ಮತ್ತು Campus Ambassdors ಗಳಿಗೆ ಇಎಲ್‌ಸಿ ತರಬೇತಿಯನ್ನು ನೀಡುವುದು.

-0-

ರಾಜ್ಯದಲ್ಲಿ ನಡೆಯುವ ರಾಜ್ಯ ವಿಧಾನ ಸಭಾ ಚುನಾವಣೆ ಹಿನ್ನಲೆಯಲ್ಲಿ ರಾಜ್ಯದಲ್ಲಿ ಸ್ಥಾಪಿತವಾಗಿರುವ ಮತದಾರರ ಜಾಗೃತಿ ಸಂಘಗಳನ್ನು ಜಾಗೃತಿಗೊಳಿಸಲು ರಾಷ್ಟ್ರ / ರಾಜ್ಯ ಮತ್ತು ಜಿಲ್ಲಾ ಮಟ್ಟದ ಇ.ಎಲ್.ಸಿ ತರಬೇತುದಾರರಿಗೆ ಈಗಾಗಲೇ ವಿವಿದ ದಿನಾಂಕಗಳಂದು ತರಬೇತಿಯನ್ನು ನೀಡಲಾಗಿದೆ. ರಾಜ್ಯದಲ್ಲಿ ತಾಲ್ಲೂಕು ಮಟ್ಟದಲ್ಲಿ ಹಾಗೂ ಎಲ್ಲಾ ಇಎಲ್‌ಸಿಯ ಸಂಚಾಲಕರಿಗೆ, ಬಿ.ಎಲ್.ಒ ಗಳಿಗೆ (ಚುನಾವಣಾ ಜಾಗೃತಿ ಸಂಘ) ಹಾಗೂ ಕ್ಯಾಂಪಸ್ ಅಂಬಾಸಿಡರ್ (Campus Ambassador) ಗಳಿಗೆ ಇಎಲ್‌ಸಿ ತರಬೇತಿಯನ್ನು ನೀಡಬೇಕಾಗಿರುತ್ತದೆ. ಈ ತರಬೇತಿಯನ್ನು ತರಬೇತಿ ಹೊಂದಿರುವ ಜಿಲ್ಲಾ / ತಾಲ್ಲೂಕು ತರಬೇತುದಾರರಿಂದ ತರಬೇತಿಯನ್ನು ನೀಡಬೇಕಾಗಿರುತ್ತದೆ.

ಎಲ್ಲಾ ತಾಲ್ಲೂಕು ಇಎಲ್‌ಸಿ ತರಬೇತುದಾರರಿಗೆ, ಇಎಲ್‌ಸಿಯ ಕನ್ವೀನರ್‌ಗಳಿಗೆ ಮತ್ತು ಕ್ಯಾಂಪಸ್ ಅಂಬಾಸಿಡರ್ ( Campus Ambassador ) ಗಳಿಗೆ ತರಬೇತಿಯನ್ನು ನೀಡಲು ಈ ಕೆಳಕಂಡ ದಿನಾಂಕಗಳಂದು ನಿಗದಿಪಡಿಸಲಾಗಿದೆ.

| ಕ್ರ ಸ | ತರಬೇತಿ | ದಿನಾಂಕ | ಸ್ಥಳ | ಸಂಪನ್ಮೂಲ ವ್ಯಕ್ತಿಗಳು |
|---|---|---|---|---|
| 1 | ತಾಲ್ಲೂಕು ಮಟ್ಟದ ಇ.ಎಲ್.ಸಿ ತರಬೇತುದಾರರ ತರಬೇತಿ | 06.03.2023 ರಿಂದ 10.03.2023 ರವರೆಗೆ | ಆಯಾ ತಾಲ್ಲೂಕುಗಳಲ್ಲಿನ ಕೇಂದ್ರ ಸ್ಥಾನದಲ್ಲಿ | ಜಿಲ್ಲಾ ಮಟ್ಟದ ಇ.ಎಲ್.ಸಿ ತರಬೇತುದಾರರು |

| | | | | |
|---|---|---|---|---|
| 2 | ಇ.ಎಲ್.ಸಿ ಸಂಚಾಲಕರಿಗೆ ಬಿ.ಎಲ್.ಓ ಗಳಿಗೆ (ಚುನಾವಣಾ ಜಾಗೃತಿ ಸಂಘ) ಮತ್ತು ಕ್ಯಾಂಪಸ್ ಅಂಬಾಸಿಡರ್ಸ್‌ಗಳಿಗೆ | 13.03.2023 ರಿಂದ 17.03.2023 ರವರೆಗೆ | ಆಯಾ ಹೋಬಳಿ ಮಟ್ಟದಲ್ಲಿ | ತಾಲ್ಲೂಕು ಮಟ್ಟದ ಇ.ಎಲ್.ಸಿ ತರಬೇತುದಾರರು |

ಎಲ್ಲಾ ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿಗಳು ತಾಲ್ಲೂಕು ಮಟ್ಟದ ತರಬೇತುದಾರರನ್ನು ಗುರುತಿಸಿ ಜಿಲ್ಲಾ ಮಟ್ಟದ ತರಬೇತುದಾರರಿಂದ ಹಾಗೂ ಎಲ್ಲಾ ಇಎಲ್‌ಸಿ ಕನ್ವೀನರ್‌ಗಳಿಗೆ ಮತ್ತು ಕ್ಯಾಂಪಸ್ ಅಂಬಾಸಿಡರ್‌ಗಳಿಗೆ ತಾಲ್ಲೂಕು ಇ.ಎಲ್.ಸಿ ತರಬೇತದಾರರಿಂದ ತರಬೇತಿ ನೀಡಲು ಸೂಕ್ತ ಆದೇಶ ಹೊರಡಿಸುವುದು. ಹಾಗೂ ತಾಲ್ಲೂಕು ಮಟ್ಟದಲ್ಲಿ ಹಾಗೂ ಹೋಬಳಿ ಮಟ್ಟದಲ್ಲಿ ತರಬೇತಿ ನೀಡಲು ಸೂಕ್ತ ವ್ಯವಸ್ಥೆಯನ್ನು ಮಾಡಲು ಸಂಬಂದಪಟ್ಟ ತಹಸೀಲ್ದಾರರಿಗೆ ಸೂಚನೆ ನೀಡುವುದು.

ಸಂಭಂದಪಟ್ಟ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಶಿಕ್ಷಣ ಇಲಾಖೆ ಇವರು ತಾಲ್ಲುಕು ಮಟ್ಟದಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ತರಬೇತಿಯನ್ನು ತರಬೇತಿಯನ್ನು ನಡೆಸಲು ಸಂಭಂದಪಟ್ಟ ಕ್ಷೇತ್ರ ಶಿಕ್ಷಣಾದಿಕಾರಗಳಿಗೆ ಸೂಚನೆ ನೀಡಲು ಹಾಗೂ ಸಂಬಂದಪಟ್ಟ ಜಿಲ್ಲಾ ಮಟ್ಟದ ಇ.ಎಲ್.ಸಿ ತರಬೇತುದಾರರು ಈ ಎರಡು ತರಬೇತಿಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲು ಸೂಚನೆ ನೀಡುವುದು.

ಈ ತರಬೇತಿಗಳಿಗೆ ತಗಲುವ ವೆಚ್ಚವನ್ನು ಸ್ವೀಪ್ ಕಾರ್ಯಕ್ರಮದಡಿಯಲ್ಲಿ ಬಿಡುಗಡೆ ಮಾಡುವ ವೆಚ್ಚದಲ್ಲಿ ಭರಿಸುವುದು. ತರಬೇತಿಯನ್ನು ನಿಗದಿತ ಸಮಯದಲ್ಲಿ ಮುಕ್ತಾಯಗೊಳಿಸುವುದು ಹಾಗೂ ವಿವಿರವಾದ ವರದಿ, ಸಕ್ಸಸ್ ಸ್ಟೋರೀಸ್ ಹಾಗೂ ಹೈ ರೆಸಲ್ಯೂಷನ್ ಫೋಟೋಗಳನ್ನು ನೀಡುವುದು.

ತಮ್ಮ ನಂಬುಗೆಯ

ಅಪರ ಮುಖ್ಯ ಚುನಾವಣಾಧಿಕಾರಿಗಳು
ಬೆಂಗಳೂರು

**ಕಾಲೇಜು ಶಿಕ್ಷಣ ಇಲಾಖೆ**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆ: ಕಾಶಿಇ/ಕೈವಿ/157/ರಾ.ಮ.ದಿನ/2020-21 ದಿನಾಂಕ: 10.03.2023

**ಪರಿಚಲನಾ ಆದೇಶ**

ಮತದಾರರ ಸಾಕ್ಷರತಾ ಸಂಘಗಳ ತಾಲ್ಲೂಕು ಮಟ್ಟದ ತರಬೇತುದಾರರಿಗೆ, ಇ.ಎಲ್.ಸಿ. ಸಂಚಾಲಕರಿಗೆ, ಬಿ.ಎಲ್.ಓ. ಗಳಿಗೆ (ಚುನಾವಣಾ ಜಾಗೃತಿ ಸಂಘ) ಮತ್ತು Campus Ambassdors ಗಳಿಗೆ ಇಎಲ್‌ಸಿ ತರಬೇತಿಯನ್ನು ನೀಡುವ ಕುರಿತು ಮುಖ್ಯ ಚುನಾವಣಾಧಿಕಾರಿಗಳಿಂದ ನಿಗಧಿಪಡಿಸಲಾಗಿರುವ ತರಬೇತಿಯ ಪತ್ರವನ್ನು ಈ ಕೆಳಕಂಡವರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ರವಾನಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ.

3. ಡಾ:ಶಶಿಶೇಖರ ರೆಡ್ಡಿ ಆರ್. ಜಿ. ಇತಿಹಾಸ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೇಡಂ, ಕಲಬುರಗಿ.
4. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಚುನಾವಣಾಧಿಕಾರಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು – 560 001.
2. ಕಛೇರಿ ಪ್ರತಿ.